# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಎ. ತಿಪ್ಪೇಸ್ವಾಮಿ, ಶ್ರೀ. ಎಸ್. ಎಲ್. ಭೋಜೇಗೌಡ, ಶ್ರೀ ಟಿ. ಎ. ಶರವಣ ಮತ್ತು ಶ್ರೀ ಸಿ. ಎನ್. ಮಂಜೇಗೌಡ ರವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಉತ್ತರ.**

ವಿಷಯ: ಕೊರೋನಾ ಸೋಂಕಿನಿಂದ ಮೃತರಾದ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಕುಟುಂಬಕ್ಕೆ 30 ಲಕ್ಷ ರೂ ಪರಿಹಾರ ನೀಡುವುದಾಗಿ ಸರ್ಕಾರ ಘೋಷಣೆ ಮಾಡಿದೆ. ಆದರೆ, ಈ ಪರಿಹಾರವನ್ನು ಗ್ರಾಮ ಪಂಚಾಯಿತಿಗಳ ತೆರಿಗೆ ಹಣದಿಂದಲೇ ಸಂಗ್ರಹಿಸಲು ರಾಜ್ಯ ಸರ್ಕಾರ ಮುಂದಾಗಿದೆ. ರಾಜ್ಯದ 5963 ಗ್ರಾಮ ಪಂಚಾಯಿತಿಗಳಿಂದ 50 ಸಾವಿರದಿಂದ 3 ಲಕ್ಷ ರೂ. ವರೆಗೆ ತೆರಿಗೆ ಹಣವನ್ನು ಚೆಕ್, ಡಿಡಿ, ಆರ್‌ಟಿಜಿಎಸ್ ಮೂಲಕ ಜಿಲ್ಲಾ ಪಂಚಾಯತಿ ಆಶ್ವಾಸನೆ ನಿಧಿ ಖಾತೆಗೆ ಜಮಾ ಮಾಡುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ದಿನಾಂಕ:02-11-2022 ರಂದು ಹೊರಡಿಸಿರುವ ಜ್ಞಾಪನ ಪತ್ರದಲ್ಲಿ ಸೂಚಿಸಲಾಗಿದೆ. ಅಲ್ಲದೇ ಹಣವನ್ನು ಜಮಾ ಮಾಡದ ಪಿ.ಡಿ.ಓ. ಗಳನ್ನು ಅಮಾನತ್ತು ಮಾಡುವುದಾಗಿ ಬೆದರಿಕೆ ಹಾಕುತ್ತೀದ್ದಿರಿ ಎಂದು ಆರೋಪ ಕೇಳಿ ಬರುತ್ತಿದೆ. ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗೆ ಸಂಬಳ ನೀಡಲು, ಗ್ರಾಮ ಸ್ವಚ್ಛ ಮಾಡಲು, ವಿದ್ಯುತ್ ಬಿಲ್ ಪಾವತಿಸಲು, ಡೀಸೆಲ್ ಖರೀದಿಗೆ ಅನುದಾನವಿಲ್ಲ ಇಂತಹ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಗ್ರಾಮ ಪಂಚಾಯಿತಿಗಳಿಂದಲೇ ಹಣ ಸಂಗ್ರಹಿಸಲು ಮುಂದಾಗಿರುವ ರಾಜ್ಯ ಸರ್ಕಾರ ಪ್ರಶ್ನಾತೀತವಾಗಿದೆ ಎಂಬುದರ ಬಗ್ಗೆ.

***

ಉತ್ತರ: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಪ್ರಕರಣ 112-113 ರಲ್ಲಿ ಗ್ರಾಮ ಪಂಚಾಯತಿಗಳಿಗೆ ಸಿಬ್ಬಂದಿ ಸ್ವರೂಪ ನಿಗಧಿಪಡಿಸಲಾಗಿದೆ. ಅದರಂತೆ ಸಿಬ್ಬಂದಿ ಸ್ವರೂಪ ಇಂತಿದೆ.

1. ಪಂಚಾಯತ್ ಅಭಿವೃದ್ಧಿ ಅಧಿಕಾರಿ,
2. ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-1/ಗ್ರೇಡ್-2,
3. ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಇವರುಗಳು ಸರ್ಕಾರದ ಸಿಬ್ಬಂದಿಗಳಾಗಿರುತ್ತಾರೆ.
4. ಬಿಲ್ ಕಲೆಕ್ಟರ್,
5. ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್
6. ವಾಟರ್ ಆಪರೇಟರ್
7. ಕ್ಲೀನರ್ಸ್
8. ಅಟೆಂಡೆಂಟ್ – ಇವರುಗಳು ಗ್ರಾಮ ಪಂಚಾಯತಿಗಳು ನೇಮಕ ಮಾಡಿಕೊಳ್ಳುವ ಸಿಬ್ಬಂದಿಯಾಗಿರುತ್ತಾರೆ.

ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ನೇಮಕಾತಿಗೆ ನಿಯಮಗಳನ್ನು ರಚಿಸಲಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 113 ರಲ್ಲಿ ಗ್ರಾಮ ಪಂಚಾಯಿತಿಯು ನೌಕರರನ್ನು ನೇಮಕ ಮಾಡಿಕೊಂಡು ತಮ್ಮ ಸ್ವಂತ ಸಂಪನ್ಮೂಲದಿಂದ ವೇತನವನ್ನು ಪಾವತಿಸಬೇಕಾಗಿರುತ್ತದೆ. ಗ್ರಾಮ ಪಂಚಾಯಿತಿಗಳು ಸರ್ಕಾರದ ಮಾರ್ಗಸೂಚಿ ಅನುಸರಿಸದೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿ ಕೊಂಡಿದ್ದರಿಂದ ಅವರಿಗೆ ಸಮರ್ಪಕವಾಗಿ ಕನಿಷ್ಠ ವೇತನ ಪಾವತಿಸುತ್ತಿರಲಿಲ್ಲ. ಗ್ರಾಮ ಪಂಚಾಯತ್ ಸಿಬ್ಬಂದಿಗಳು ತಮಗೆ ಸಮರ್ಪಕವಾಗಿ ಕನಿಷ್ಠ ವೇತನ ಪಾವತಿಯಾಗದಿರುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದನ್ನು ಪರಿಗಣಿಸಿ ಮಾರ್ಚ್ 2018 ರಿಂದ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಸರ್ಕಾರದ ವತಿಯಿಂದಲೇ ಕನಿಷ್ಠ ವೇತನ ಪಾವತಿಸಲಾಗುತ್ತಿದೆ. ಈ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಹೊರತುಪಡಿಸಿ ವೈದ್ಯಕೀಯ ವೆಚ್ಚ ಮರು ಪಾವತಿ ಹೀಗೆ ಯಾವುದೇ ಹೆಚ್ಚುವರಿ ಸೌಲಭ್ಯಗಳು ಇರುವುದಿಲ್ಲ.

2020 ರ ಕೋವಿಡ್ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿಗಳು ಕೋವಿಡ್ ನಿಯಂತ್ರಣಕ್ಕಾಗಿ ಶ್ರಮಿಸುತ್ತಿದ್ದ ವೇಳೆ ಕೋವಿಡ್ ಸೋಂಕಿನಿಂದ ಮೃತಪಟ್ಟ ಸಂದರ್ಭದಲ್ಲಿ ಸರ್ಕಾರವು ಅವರಿಗೆ 30 ಲಕ್ಷ ರೂ ಪರಿಹಾರ ಘೋಷಿಸಿತ್ತು. ಘೋಷಿಸಲಾದ ಪರಿಹಾರ ಪಾವತಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತ್ ನೌಕರರು ಕೋವಿಡ್-19 ಕರ್ತವ್ಯ ನಿರ್ವಹಿಸುತ್ತಿದ್ದಾಗ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಮರಣ ಹೊಂದಿದ್ದಲ್ಲಿ ಅವರ ಕುಟುಂಬದವರಿಗೆ 30 ಲಕ್ಷ ರೂ ಪರಿಹಾರ ನೀಡಲು ಅಥವಾ ಕೋವಿಡ್-19 ಸಾಂಕ್ರಾಮಿಕದಿಂದಾಗಿ ಅನಾರೋಗ್ಯಗೊಂಡಲ್ಲಿ ಸದರಿ ಚಿಕಿತ್ಸೆಗಾಗಿ ತಗಲುವ ವೈದ್ಯಕೀಯ ವೆಚ್ಚ ಭರಿಸಲು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಆಶ್ವಾಸನೆ ನಿಧಿಯನ್ನು ಸ್ಥಾಪಿಸಿ ಪರಿಹಾರ ನೀಡಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ಜಿಪಿಎಸ್ 2021, ದಿನಾಂಕ:28-06-2021 ರಲ್ಲಿ ತಿಳಿಸಲಾಗಿದೆ.

ಆಶ್ವಾಸನಾ ನಿಧಿಗೆ ನೀಡಲಾಗುವ ವಂತಿಗೆ ವಿವರ:

- ಪ್ರತಿ ಜಿಲ್ಲಾ ಪಂಚಾಯತಿ ನಿರ್ವಹಣಾ ನಿಧಿ ಅಥವಾ ತಮ್ಮ ಸ್ವಂತ ಸಂಪನ್ಮೂಲಗಳಿಂದ ರೂ.10.00 ಲಕ್ಷಗಳನ್ನು ಒಂದು ಬಾರಿಗೆ ನೀಡತಕ್ಕದ್ದು.
- ಆಯಾ ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಪಂಚಾಯತಿಯು ತಾಲ್ಲೂಕು ಪಂಚಾಯತ್ ಅದಿಭಾರ ಶುಲ್ಕ ಅಥವಾ ಸ್ವಂತ ನಿಧಿಯಿಂದ ರೂ.5.00 ಲಕ್ಷಗಳನ್ನು ಒಂದು ಬಾರಿಗೆ ನೀಡತಕ್ಕದ್ದು.
- ಗ್ರಾಮ ಪಂಚಾಯತಿಗಳಿಗೆ ಅವರ ವಾರ್ಷಿಕ ತೆರಿಗೆ ಬೇಡಿಕೆ ಆಧಾರದ ಮೇಲೆ ವಂತಿಗೆಯನ್ನು ವಾರ್ಷಿಕವಾಗಿ ನಿಗದಿಪಡಿಸಿದೆ. ಅಂದರೆ ವಾರ್ಷಿಕ ಡಿಸಿಬಿ ಬೇಡಿಕೆ:

I) ರೂ. 50.00 ಲಕ್ಷಕ್ಕಿಂತ ಹೆಚ್ಚಿಗೆ ಇರುವ ಗ್ರಾಮ ಪಂಚಾಯತಿಗಳು ಈ ನಿಧಿಗೆ ರೂ. 3.00 ಲಕ್ಷ ವಾರ್ಷಿಕ ವಂತಿಗೆ ನೀಡತಕ್ಕದ್ದು.

II) ರೂ. 20,00 ರಿಂದ ರೂ. 50.00 ಲಕ್ಷದ ವಾರ್ಷಿಕ ಡಿಸಿಬಿ ಬೇಡಿಕೆ ಇರುವ ಗ್ರಾಮ ಪಂಚಾಯತಿಗಳು ರೂ.1.00 ಲಕ್ಷ ವಾರ್ಷಿಕ ವಂತಿಗೆ ನೀಡತಕ್ಕದ್ದು.

III) ರೂ.20.00 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಡಿಸಿಬಿ ಬೇಡಿಕೆ ಇರುವ ಗ್ರಾಮ ಪಂಚಾಯತಿ ವತಿಯಿಂದ ರೂ. 0.50 ಲಕ್ಷ ವಾರ್ಷಿಕ ವಂತಿಗೆಯನ್ನು ನೀಡತಕ್ಕದ್ದು.

ಆಶ್ವಾಸನಾ ನಿಧಿ ಮೂಲಕ ಕೋವಿಡ್‌ನಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡುವುದರ ಜೊತೆಗೆ ಆಶ್ವಾಸನಾ ನಿಧಿಯನ್ನು ಖಾಯಂ ಆಗಿ ಮುಂದುವರಿಸಿ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಗಂಭೀರ ಖಾಯಿಲೆಗೆ ತುತ್ತಾಗಿ/ಅಪಘಾತಕ್ಕೊಳಗಾಗಿ ಮರಣ ಹೊಂದಿದ ವೇಳೆಯೂ ಈ ನಿಧಿಯಿಂದ ಪರಿಹಾರ ಪಾವತಿಸಲು ಉದ್ದೇಶಿಸಲಾಗಿದೆ. ಗ್ರಾಮ ಪಂಚಾಯತಿ ನೌಕರರ ಕ್ಷೇಮಾಭಿವೃದ್ಧಿಗಾಗಿ ಆಶ್ವಾಸನಾ ನಿಧಿಯನ್ನು ಸ್ಥಾಪಿಸಲಾಗಿದೆ ಹಾಗೂ ಈ ನಿಧಿಗೆ ಗ್ರಾಮ ಪಂಚಾಯತಿಗಳ ಸಾಮರ್ಥ್ಯಾನುಸಾರ ವಂತಿಕೆ ನೀಡಲು ತಿಳಿಸಲಾಗಿದೆ. ಗ್ರಾಮ ಪಂಚಾಯತಿಗಳಿಗೆ ಯಾವುದೇ ತೊಂದರೆ ಮಾಡುವ ಉದ್ದೇಶ ಇದರಲ್ಲಿರುವುದಿಲ್ಲ.

ಸಂಖ್ಯೆ: ಗ್ರಾಅಪ 409 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

62 330